ಕ್ರ.ಸಂ:ಜಿಪಂಕಾ/ಮುಕಾನಿಅ/ಆಶಾ/ಕರೋನಾ/ಸಿಆರ್-2/2020-21

ಜಿಲ್ಲಾ ಪಂಚಾಯತ ಕಾರ್ಯಾಲಯ
ಉತ್ತರಕನ್ನಡ
ಕಾರವಾರ, ದಿನಾಂಕ:24-04-2020

## ಅಧಿಕೃತ ಜ್ಞಾಪನ

**ವಿಷಯ:-** ಕೋವಿಡ್-19 (ಕರೋನಾ ವೈರಸ್) ನಿಯಂತ್ರಣಕ್ಕೆ ಸಂಬಂಧಿಸಿದಂತೆ, ಶಂಕಿತ ರೋಗಿಗಳ ಮೇಲೆ ನಿಗಾ ವಹಿಸುವ ಕುರಿತು.

*****

COVID-19 ಕರೋನಾ ವೈರಸ್ ನಿಯಂತ್ರಣಕ್ಕಾಗಿ, ಶಂಕಿತ ರೋಗಿಗಳನ್ನು ಗುರುತಿಸಿ, ಅವರ ಮೇಲೆ ನಿಗಾ ವಹಿಸುವ ಅಗತ್ಯತೆ ಇದೆ. ಜಿಲ್ಲೆಯ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ, ಹಲವು ಸಾರ್ವಜನಿಕರು ಜ್ವರ, ಶೀತ, ಕೆಮ್ಮು ಮುಂತಾದ ಕಾಹಿಲೆಗಳಿಗೆ ಸ್ಥಳೀಯ ಮೆಡಿಕಲ್ ಶಾಪ್ ಗಳಿಂದ ನೇರವಾಗಿ ಔಷಧಿ ಹಾಗೂ ಮಾತ್ರೆಗಳನ್ನು ಖರೀದಿಸುತ್ತಿರುವುದನ್ನು ಗಮನಿಸಲಾಗಿದೆ. COVID-19 ಕರೋನಾ ವೈರಸ್ ರೋಗ ಲಕ್ಷಣಗಳಲ್ಲಿ ಜ್ವರ, ಶೀತ, ಕೆಮ್ಮು , ಎದೆನೋವು ಇತ್ಯಾದಿಗಳು ಸೇರಿದ್ದು, ಸ್ಥಳೀಯ ಮೆಡಿಕಲ್ ಶಾಪ್‌ಗಳಿಂದ ಈ ರೋಗ ಲಕ್ಷಣಗಳಿಗಾಗಿ ಔಷಧಿ ಹಾಗೂ ಮಾತ್ರೆಗಳನ್ನು ಖರೀದಿಸುವ ರೋಗಿಗಳಲ್ಲಿ ಕೊರೋನಾ ಲಕ್ಷಣಗಳಿರುವ ಸಾಧ್ಯತೆಗಳಿರುವ ಕಾರಣ, ಇಂಥಹ ರೋಗಿಗಳ ಕುರಿತು ವಿಶೇಷ ನಿಗಾ ವಹಿಸ ಬೇಕಾಗುತ್ತದೆ.

ಕಾರಣ, ಮೆಡಿಕಲ್ ಶಾಪ್ ಗಳಿಂದ ಜ್ವರ, ಶೀತ, ಕೆಮ್ಮು ಮುಂತಾದ ಕಾಹಿಲೆಗಳಿಗೆ ಔಷಧಿ ಹಾಗೂ ಮಾತ್ರೆಗಳನ್ನು ಖರೀದಿಸುವ ಸಾರ್ವಜನಿಕರ ಹೆಸರು, ಊರು, ಮೊಬೈಲ್ ಸಂಖ್ಯೆ ಇತ್ಯಾದಿ ವಿವರಗಳ ದಿನವಹಿ ಮಾಹಿತಿಯನ್ನು ಸಂಬಂಧಿಸಿದ ಮೆಡಿಕಲ್ ಶಾಪ್‌ಗಳಲ್ಲಿ ನಿರ್ವಹಿಸುವಂತೆ ಸೂಚಿಸಿದೆ. ಈ ಕುರಿತು, ನಗರ ಪ್ರದೇಶಗಳಲ್ಲಿನ ಮೆಡಿಕಲ್ ಶಾಪ್‌ಗಳಿಗೆ ಸಂಬಂಧಿತ ತಾಲೂಕಾ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಮೆಡಿಕಲ್ ಶಾಪ್‌ಗಳಿಗೆ ಸಂಬಂಧಿತ ಗ್ರಾಮ ಪಂಚಾಯತ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ನೀಡುವುದು. ಹಾಗೂ ಸದರಿಯವರಿಂದ ಜ್ವರ, ಶೀತ, ಹಾಗೂ ಕೆಮ್ಮು ಸಂಬಂಧಿತ ಔಷಧಿ ಹಾಗೂ ಮಾತ್ರೆ ವಿಲೇವಾರಿಯ ದಿನವಹಿ ಮಾಹಿತಿ ಸಂಗ್ರಹಿಸಿ, ತಾಲೂಕಾ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು ಕ್ರೋಢಿಕೃತ ವರದಿಯನ್ನು ಪ್ರತಿದಿನ 05.00 ಘಂಟೆ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಉತ್ತರಕನ್ನಡ ಜಿಲ್ಲಾ ಪಂಚಾಯತ, ಕಾರವಾರ

ರಿಗೆ,

1) ಜಿಲ್ಲೆಯ ಎಲ್ಲ ತಾಲೂಕಾ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು.
2) ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು (ಸಂಬಂಧಿತ ತಾಲೂಕಾ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳ ಮೂಲಕ)
3) DIO, NIC ಕಾರವಾರ ಇವರಿಗೆ ಕಳುಹಿಸಿ, ಆದೇಶದ ಪ್ರತಿಯನ್ನು , ZP website ನಲ್ಲಿ ಅಳವಡಿಸಲು ಸೂಚಿಸಿದೆ.